ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Dr. MANMOHAN SINGH
BENGALURU CITY UNIVERSITY

Jnanajyothi Central College Campus, Dr. B.R Ambedkar Veedhi, Bengaluru-560001,
Ph. No.080-22131385 E-Mail ID: registrar@bcu.ac.in

**ಸಂಖ್ಯೆ:ಡಾ.ಮ.ಮೋ.ಸಿಂ.ಬೆಂ.ನ.ವಿ/ವಿ.ವೇ.ಶಾ/ಪಿ.ಎಚ್‌ಡಿ.ಸು/029** **ದಿನಾಂಕ**:22.06.2026.

## ಸುತ್ತೋಲೆ

**ವಿಷಯ:** ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ PhD ಪೂರ್ಣಾವಧಿ (Full Time) ಅಧ್ಯಯನದಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾಸಿಕ **ವ್ಯಾಸಂಗ ವೇತನ/Fellowship** ಕಾರ್ಯಕ್ರಮದಡಿ ಸರ್ಕಾರವು ನೂತನ ಮಾರ್ಗಸೂಚಿಯನ್ನು ಹೊರಡಿಸಿರುವ ಬಗ್ಗೆ:

**ಉಲ್ಲೇಖ:**
1. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ. ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: SED-SEHCOSC/67/2025
2. ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ 445/ಆಕವಿ 2025, ಬೆಂಗಳೂರು, ದಿನಾಂಕ: 28.05.2025.

*****

ಉಲ್ಲೇಖಿತ ಪತ್ರದಲ್ಲಿ ವಿವರಿಸಿರುವಂತೆ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ PhD ಪೂರ್ಣಾವಧಿ ಅಧ್ಯಯನದಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ ರೂ.10,000/- (ರೂ. ಹತ್ತು ಸಾವಿಗಳು ಮಾತ್ರ)ರಂತೆ ವ್ಯಾಸಂಗ ವೇತನ Fellowship ಅನ್ನು ಈ ಕೆಳಕಂಡ ಮಾರ್ಗಸೂಚಿಗಳ ಅನ್ವಯ ಮಂಜೂರು ಮಾಡಲಾಗುವುದು.

### 1. ಯೋಜನೆಯ ಉದ್ದೇಶ:-

- ಪೂರ್ಣಾವಧಿ PhD ಅಧ್ಯಯನದಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾಸಿಕ ರೂ.10,000/- (ರೂ. ಹತ್ತು ಸಾವಿಗಳು ಮಾತ್ರ)ರಂತೆ ವ್ಯಾಸಂಗ ವೇತನ / Fellowship ಅನ್ನು ಮಂಜೂರು ಮಾಡಲಾಗುವುದು. ಮಂಜೂರು ಮಾಡಿ ಸಂಶೋಧನೆಯಲ್ಲಿ ತೊಡಗಿ ಕೊಳ್ಳಲು ನೆರವಾಗುವುದು.

- ಮಾನವಿಕ ವಿಷಯಗಳ ಭಾಷೆ, ಸಮಾಜ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ ಮತ್ತು ನಿರ್ವಹಣೆ ವಿಷಯಗಳಲ್ಲಿ PhD ಪೂರ್ಣಾವಧಿ ಅಧ್ಯಯನದಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ ರೂ.10,000/- (ರೂ. ಹತ್ತು ಸಾವಿಗಳು ಮಾತ್ರ)ರಂತೆ ವ್ಯಾಸಂಗ ವೇತನ/ Fellowship ಅನ್ನು ನೀಡಲಾಗುವುದು.

2. ***ಮಾಸಿಕ ವ್ಯಾಸಂಗ ವೇತನ/ Fellowship ಮತ್ತು ಅವಧಿ :-***

- ಈ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ. 10,000/- (ರೂ. ಹತ್ತು ಸಾವಿರ)ರಂತೆ ಗರಿಷ್ಠ 5 ವರ್ಷದ ಅವಧಿಗೆ ಅಥವಾ ಕೋರ್ಸ್ ಮುಕ್ತಾಯದ ಅವಧಿಯಲ್ಲಿ ಯಾವುದು ಮೊದಲು ಆ ಅವಧಿಗೆ ವ್ಯಾಸಂಗ ವೇತನ/ Fellowship ಅನ್ನು DBT ಮೂಲಕ ವಿದ್ಯಾರ್ಥಿಯು ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮ ಮಾಡಲಾಗುವುದು.

- ವ್ಯಾಸಂಗ ವೇತನ/ Fellowship ಅನ್ನು ಗರಿಷ್ಠ 5 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಮಂಜೂರು ಮಾಡಲು ಅವಕಾಶವಿಲ್ಲ.

3. ***ಅಭ್ಯರ್ಥಿ ಆಯ್ಕೆಗೆ ನಿಗಧಿ ಪಡಿಸಿರುವ ಅರ್ಹತೆಗಳು:-***

- ಸಂಶೋಧನಾ ವಿದ್ಯಾರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.

- ಕರ್ನಾಟಕ ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪೂರ್ಣಾವಧಿ (Full Time) Ph.D ಅಧ್ಯಯನದಲ್ಲಿ ತೊಡಗಿರಬೇಕು.

- ಈ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಯು ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ವಿಶ್ವ ವಿದ್ಯಾಲಯ UGC ಅಥವಾ ಇತರೆ ಯಾವುದೇ ಸಂಸ್ಥೆಗಳಿಂದ ಮಾಸಿಕ ವ್ಯಾಸಂಗ ವೇತನ/ Fellowshipಗೆ ಆಯ್ಕೆಯಾಗಿರಬಾರದು.

4. ***ಶೈಕ್ಷಣಿಕ ಅರ್ಹತೆಗಳು:***

- ಸಂಶೋಧನಾ ವಿದ್ಯಾರ್ಥಿಯು ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ. 50 ಅಂಕಗಳನ್ನು ಪಡೆದಿರಬೇಕು.

- ಸರ್ಕಾರಿ ವಿಶ್ವವಿದ್ಯಾಲಯದ ಅಧಿಕೃತ ಸಂಶೋಧನಾ ಮಾರ್ಗದರ್ಶಕರ ಅಡಿಯಲ್ಲಿ Ph.D ಅಧ್ಯಯನಕ್ಕಾಗಿ ನೊಂದಣಿ ಮಾಡಿಕೊಂಡಿರಬೇಕು.

- ಈ ಯೋಜನೆಯಡಿ ಸಂಶೋಧನಾ ಅಭ್ಯರ್ಥಿಗೆ ಒಂದು ಸಂಶೋಧನಾ ವಿಷಯಕ್ಕೆ ಒಮ್ಮೆ ಮಾತ್ರ ಶಿಷ್ಯ ವೇತನವನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತಾರೆ.

- ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿಯು ಮಾತ್ರ ಶಿಷ್ಯ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಅರೆಕಾಲಿಕ (Part time) ಸಂಶೋಧನಾ ವಿದ್ಯಾರ್ಥಿಗಳು ಸದರಿ ಯೋಜನೆಯಡಿ ಅರ್ಹತೆಯನ್ನು ಹೊಂದಿರುವುದಿಲ್ಲ.

## 5. ವಯೋಮಿತಿ 45 ವರ್ಷ:-

- ಅಭ್ಯರ್ಥಿಯು ಗರಿಷ್ಠ ವಯೋಮಿತಿ 45 ವರ್ಷಗಳ ಒಳಗಿರಬೇಕು.

## 6. ವಾರ್ಷಿಕ ಆಧಾಯದ ಮಿತಿ:-

- ಸದರಿ ಯೋಜನೆಯಡಿ Fellowshipಗಾಗಿ ಅರ್ಜಿ ಸಲ್ಲಿಸುವ ಸಂಶೋಧನಾ ವಿದ್ಯಾರ್ಥಿಯು ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.10.00ಲಕ್ಷದ ಒಳಗಿರಬೇಕು. ಈ ಕುರಿತು ಕಂದಾಯ ಅಧಿಕಾರಿಗಳಿಂದ ಧೃಢೀಕರಣ ಪ್ರಮಾಣ ಪತ್ರವನ್ನು ಪಡೆದು ಹಾಜರು ಪಡಿಸಬೇಕು.

- ಕೇಂದ್ರ/ರಾಜ್ಯ ಸರ್ಕಾರಿ/ ಅನುದಾನ ಸಂಸ್ಥೆ/ ಸಾರ್ವಜನಿಕ ಸೌಮ್ಯತೆಗೆ ಒಳಪಟ್ಟ ಸಂಸ್ಥೆಗಳ ಉದ್ಯೋಗಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.
- ಒಬ್ಬ ಅಭ್ಯರ್ಥಿಗೆ ಒಂದು ಬಾರಿ ಮಾತ್ರ PhD ಅಧ್ಯಯನಕ್ಕಾಗಿ ಈ ಸೌಲಭ್ಯವನ್ನು ಒದಗಿಸಲಾಗಿದೆ.

## 7. ಶಿಷ್ಯ ವೇತನಕ್ಕಾಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ:-

- ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯಲ್ಲಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (State Scholarship Portal- SSP) ಮೂಲಕ ಅರ್ಜಿ ಸಲಿಸಬೇಕು.
- ಅಭ್ಯರ್ಥಿಯು ತನ್ನ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರಬೇಕು.

- ವಿಶ್ವವಿದ್ಯಾಲಯವು ಸದರಿ ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿಗಳ Bonified ವಿವರಗಳನ್ನು UUCMSನ ಮೂಲಕ Real timeನಲ್ಲಿ ಒದಗಿಸಬೇಕು.

- ವಿಶ್ವವಿದ್ಯಾಲಯವಾರು ಅಧಿಕೃತ ಗೈಡ್‌ಗಳ ನೊಂದಣಿ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯದ SSP/ವಿದ್ಯಾರ್ಥಿ ವೇತನದ ನೊಡಲ್ ಅಧಿಕಾರಿ ನಿರ್ವಹಿಸತಕ್ಕದ್ದು.

- ಇತರೆ ಶೈಕ್ಷಣಿಕ ವಿವರಗಳನ್ನು ಆನ್ಲೈನ್ ಮೂಲಕವೇ ಕಾಲಕಾಲಕ್ಕೆ SSP Empowerment Officer Login ಮೂಲಕ ಆಗಿಂದಾಗ್ಗೆ Update ಮಾಡುವುದು.

8. ***ಮಂಜೂರಾತಿ ವಿಧಾನ:-***

- ಅಭ್ಯರ್ಥಿಯು SSP ಮೂಲಕ Onlineನಲ್ಲಿ ಸಲ್ಲಿಸಿದ ಅರ್ಜಿಯು ನೇರವಾಗಿ ಸಂಬಂಧ ಪಟ್ಟ ವಿಶ್ವವಿದ್ಯಾಲಯದ Empowerment Officer Loginಗೆ ರವಾನೆಯಾಗುತ್ತದೆ.

- ಈ ಸಂಬಂಧ ಪ್ರತಿ ವಿಶ್ವವಿದ್ಯಾಲಯದ ಅಧಿಕೃತ ಮಾರ್ಗದರ್ಶಕರು (Guide) ಕಡ್ಡಾಯವಾಗಿ ಇಲಾಖೆಯ ತಾಲ್ಲೂಕು ಮಟ್ಟದ ಕಛೇರಿಯಲ್ಲಿ Empowerment officer ಆಗಿ ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಒಂದು ವಿಶ್ವವಿದ್ಯಾಲಯದಲ್ಲಿ ಈ ಸಂಬಂಧ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ Empowerment officer's ಆಗಿ ನೊಂದಣಿಯಾಗಲು ಅವಕಾಶ ಕಲ್ಪಿಸಲಾಗಿದೆ.

- ಪ್ರತಿ ಮಾಹೆ Empowerment officer ಅವರ Login ಮೂಲಕ ವಿದ್ಯಾರ್ಥಿಯ ಹಾಜರಾತಿಯನ್ನು ಧೃಢೀಕರಿಸಬೇಕಾಗುತ್ತದೆ. ಅಭ್ಯರ್ಥಿಯು ಕನಿಷ್ಠ ಶೇ.75% ರಷ್ಟು ಹಾಜರಾತಿ ಹೊಂದಿದ್ದಲ್ಲಿ ಮಾತ್ರ ಆ ಮಾಹೆಯ Fellowship ಅನ್ನು ಮಂಜೂರು ಮಾಡಲು ಪರಿಗಣಿಸಲಾಗುವುದು.

- Empowerment officerನಿಂದ ಅನುಮೋದನೆಗೊಂಡ ಅರ್ಜಿಗಳು ಸಮಾಜ ಕಲ್ಯಾಣ ಇಲಾಖೆಯ Loginಗೆ ರವಾನೆಯಾಗಲಿದ್ದು, ನಂತರದಲ್ಲಿ ಮಾಹೆಯಾನ ಹಾಜರಾತಿಯ ಆಧಾರದ ಮೇಲೆ DBT ಮೂಲಕ ಪಾವತಿ ಮಾಡಲಾಗುವುದು.

9. ***ಇತರೆ ಷರತ್ತುಗಳು:-***

- ಸಂಶೋಧನಾ ವಿದ್ಯಾರ್ಥಿಗಳು ಅವರು ಆಯ್ಕೆಗೊಂಡ ವಿಷಯದಲ್ಲಿ ಸಂಶೋಧನೆ ನೆಡೆಸುತ್ತಿರುವ ಬಗ್ಗೆ, ತರಗತಿಗಳಿಗೆ ಹಾಜರಾಗಿರುವ ಬಗ್ಗೆ, ಕ್ಷೇತ್ರ ಬೇಟಿ (Field visit), ಸಂಪನ್ಮೂಲ ವ್ಯಕ್ತಿಗಳ ಜೊತೆ ಚರ್ಚೆ ಹಾಗೂ ಅಧ್ಯಯನಕ್ಕೆ ಬಳಸಿರುವಂತಹ ಗ್ರಂಥಗಳ ವಿವರ ಎಲ್ಲಾ ಮಾಹಿತಿಗಳನ್ನು ಒಳಗೊಂಡಂತಹ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ಮಾರ್ಗದರ್ಶಕರು (Guide) ಹಾಗೂ ವಿಶ್ವವಿದ್ಯಾಲಯದ ವಿಭಾಗದ ಮುಖ್ಯಸ್ಥರ ಅನುಮೋದನೆ ಮೂಲಕ ನೋಡೆಲ್ ಅಧಿಕಾರಿಗಳಿಗೆ ಸಲ್ಲಿಸಬೇಕು.

- ಮಾಸಿಕ ವ್ಯಾಸಂಗ ವೇತನ/Fellowshipಗೆ ಆಯ್ಕೆಗೊಂಡ ವಿದ್ಯಾರ್ಥಿಗಳು ಅದೇ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸತಕ್ಕದ್ದು. ವ್ಯಾಸಂಗದ ಮಧ್ಯದಲ್ಲಿ ವಿಶ್ವವಿದ್ಯಾಲಯವನ್ನಾಗಲಿ ಅಥವಾ ಸಂಶೋಧನಾ ವಿಷಯವನ್ನಾಗಲಿ ಬದಲಾಯಿಸಲು ಅವಕಾಶವಿರುವುದಿಲ್ಲ.

- ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನಾ ಅವಧಿಯಲ್ಲಿ ಯಾವುದೇ ವೃತ್ತಿಯಲ್ಲಿ ತೊಡಗಲು ಅವಕಾಶವಿರುವುದಿಲ್ಲ.

- ಪ್ರತಿ ಮಾಹೆ ಮಾರ್ಗದರ್ಶಕರು ತಮ್ಮ Login ಮೂಲಕ ಧೃಢೀಕರಿಸಿದ್ದಲ್ಲಿ ಮಾತ್ರ Fellowshipಗೆ ಪರಿಗಣಿಸಲಾಗುವುದು.

- ಸದರಿ ಸುತ್ತೊಲೆಯಲ್ಲಿ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳ ಬಗ್ಗೆ ಆಯಾ ವಿಭಾಗದ ಮುಖ್ಯಸ್ಥರು ತಮ್ಮ-ತಮ್ಮ ವಿಭಾಗದಲ್ಲಿ PhD ಮಾಡುತ್ತಿರುವ ಪ್ರತಿಯೊಬ್ಬ SC ST ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಕೋರಿ ಸುತ್ತೋಲೆಯ ಪ್ರತಿಯನ್ನು ತಮ್ಮ ವಿಭಾಗದ ನೋಟಿಸ್ ಬೋರ್ಡ್ ನಲ್ಲಿ ಪ್ರದರ್ಶಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು (ಆ).

ಕುಲಸಚಿವರು (ಆ)
ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು - 560 001

22/1/26

<u>ಪ್ರತಿ</u>

1. ಕುಲಪತಿಗಳು ಡಾ. ಮನಮೋಹನ್ ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾಲಯ ರವರ ಮಾಹಿತಿಗಾಗಿ.
2. ಕುಲಸಚಿವರು (ಮೌ), ಡಾ. ಮನಮೋಹನ್ ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ವಿತ್ತಾಧಿಕಾರಿಗಳು ಡಾ. ಮನಮೋಹನ್ ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
4. ಎಲ್ಲಾ ವಿಭಾಗದ ಮುಖ್ಯಸ್ಥರು ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ. ಮನಮೋಹನ್ ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾಲಯ ರವರ ಮಾಹಿತಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ.
5. ಡಾ. ಮನಮೋಹನ್ ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾಲಯದ Websiteನಲ್ಲಿ ಮಾಹಿತಿಯನ್ನು ಪ್ರಚಾರಪಡಿಸಲು.
6. ಕಛೇರಿ ಪ್ರತಿ.